## ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್‌ಎಸ್‌ಎ/ಆರ್‌ಎಂಎಸ್‌ಎ ಇವರು ದಿನಾಂಕ: 30.05.2013 ರಂದು ಬೆಂಗಳೂರು ನಗರದಲ್ಲಿ ನಡೆಯುತ್ತಿರುವ ಯುಡಿಸಿ ಕೇಂದ್ರಗಳಿಗೆ ನೀಡಿದ ಅನಿರೀಕ್ಷಿತ ಭೇಟಿ ವರದಿ.

*****

**1) ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ರಾಜೀವಗಾಂಧಿ ಕಾಲೋನಿ, ಮಿಲ್ಲರ್ಸ್ ರಸ್ತೆ, ಬೆಂಗಳೂರು:-**

**ಕೇಂದ್ರವನ್ನು ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು :- ಸ್ಪರ್ಶ ಟ್ರಸ್ಟ್, ಬೆಂಗಳೂರು**

ಮಧ್ಯಾಹ್ನ 02.00 ಗಂಟೆಗೆ ಸದರಿ ಕೇಂದ್ರಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಕೇಂದ್ರಕ್ಕೆ ದಾಖಲಾದ ಮಕ್ಕಳು 53. ಭೇಟಿ ನೀಡಿದ ಸಂದರ್ಭದಲ್ಲಿ 25 ಮಕ್ಕಳು ಹಾಜರಿದ್ದರು. ಪರಿಶೀಲನಾ ಸಂದರ್ಭದಲ್ಲಿ ಕೆಳಕಂಡ ಅಂಶಗಳನ್ನು ಗಮನಿಸಲಾಯಿತು.

**ಭೇಟಿ ಅವಧಿಯಲ್ಲಿ ಕಂಡು ಬಂದ ನ್ಯೂನತೆಗಳು:-**

- ಕೇಂದ್ರಗಳಲ್ಲಿ ಕೆಲವು ಮಕ್ಕಳನ್ನು ಸಂದರ್ಶಿಸಿದಾಗ ಆ ಮಕ್ಕಳು ದೀರ್ಘಾವಧಿಯಿಂದ (ಸುಮಾರು 01 ವರ್ಷದಿಂದಲೂ) ಕೇಂದ್ರದಲ್ಲಿರುವುದನ್ನು ಗಮನಿಸಲಾಯಿತು. ಯುಡಿಸಿ ಕೇಂದ್ರಗಳು ಅವಕಾಶ ವಂಚಿತ ಮಕ್ಕಳಿಗೆ ಕೇವಲ ತಾತ್ಕಾಲಿಕ ಚಿಣ್ಣರ ತಂಗುಧಾಮವೇ ವಿನಹ, ಪೂರ್ಣಕಾಲಿಕ ವಸತಿಗೃಹ ಆಗಿರುವುದಿಲ್ಲ. ಇಲ್ಲಿ ವಿವಿಧ ಹಿನ್ನೆಲೆಯಲ್ಲಿ ಶೋಷಣೆಗೆ ಒಳಪಟ್ಟ ಅವಕಾಶ ವಂಚಿತ ಮಕ್ಕಳಿಗೆ ಶಿಕ್ಷಣಕ್ಕೆ ಪೂರಕವಾದ ಮನಸ್ಥಿತಿಯನ್ನು ತರಿಸುವಲ್ಲಿ ಪೂರ್ಣ ಸಿದ್ಧತಿಯನ್ನು ನಡೆಸಿ ವಿಶೇಷ ತರಬೇತಿಗೆ ಸಜ್ಜುಗೊಳಿಸಿ ಪೋಷಕರಿದ್ದಂತ ಸಂದರ್ಭದಲ್ಲಿ ಪೋಷಕರೊಂದಿಗೆ ಸಮಾಲೋಚಿಸಿ ಮಗುವನ್ನು ಶಾಲೆಗೆ ದಾಖಲುಪಡಿಸುವ ವಿಷಯ ಮನದಟ್ಟು ಮಾಡಿಸಿ ಮಗುವನ್ನು ವಿಶೇಷ ತರಬೇತಿ ಅಥವ ಮುಖ್ಯವಾಹಿನಿ ಶಾಲೆಗೆ ದಾಖಲು ಪಡಿಸಿಸಲು(ನಿಖರವಾಗಿ ಮಕ್ಕಳ ಅವಶ್ಯಕತೆಯ ಅನುಗುಣವಾಗಿ) ಕ್ರಮವಹಿಸುವುದಾಗಿರುತ್ತದೆ. ಈ ಬಗ್ಗೆ ತುರ್ತಾಗಿ ಮುಖ್ಯ ವಾಹಿನಿಗೆ ಸೇರಿಸಲು ಸಂಬಂಧಿಸಿದ ಸಿಬ್ಬಂದಿಯವರು ತಕ್ಷಣ ಕ್ರಮ ವಹಿಸಬೇಕು.

  **(ಕ್ರಮ: ಸ್ಪರ್ಶ ಟ್ರಸ್ಟ್/ಸಿ.ಆರ್.ಸಿ/ಬಿ.ಆರ್.ಸಿ/ಕ್ಷೇ.ಶಿ.ಅ)**

- ಎನ್‌ಜಿಒರವರು ಆ ಮಗುವಿನ ಚೈಲ್ಡ್ ಟ್ರ್ಯಾಕ್ ಅನ್ನು ಅನುಸರಿಸಿ ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಸರ್ಕಾರದ ಯೋಜನೆಯ ಜೊತೆ ಕೈಗೂಡಿಸುವ ಕ್ರಮವಾಗಬೇಕು. ನಿಯಮಾನುಸಾರ ಕ್ರಮವಹಿಸುವಲ್ಲಿ ಸ್ವಯಂ ಸೇವಕ ಸಂಸ್ಥೆಗಳು ಮಾಹಿತಿಯನ್ನು ಪಡೆದು ಅದರಂತೆ ಕೇಂದ್ರಗಳನ್ನು ನಿರ್ವಹಿಸಬೇಕು

  **ಕ್ರಮ: (ಸ್ಪರ್ಶ ಟ್ರಸ್ /ಸಿ.ಆರ್.ಸಿ/ಬಿ.ಆರ್.ಸಿ)**

- ಯುಡಿಸಿ ಕೇಂದ್ರದ ನಿರ್ವಹಣೆ, ಅನುಷ್ಠಾನದಲ್ಲಿ ನಿಯಮಾನುಸಾರ ಮಾರ್ಗದರ್ಶನದ ಕೊರತೆ (ಜಿಲ್ಲಾ ಹಂತದಿಂದ ಕ್ಲಸ್ಟರ್ ಹಂತದ ಅಧಿಕಾರಿಗಳಿಗೆ ಮತ್ತು ಕೇಂದ್ರ ನಡೆಸುತ್ತಿರುವ ಎನ್‌ಜಿಒಗಳಿಗೆ) ಇರುವುದನ್ನು ಗಮನಿಸಲಾಯಿತು. ತರಬೇತಿಯನ್ನು ಆಯೋಜಿಸಲು ಸಿದ್ಧಿವಾಗಿರು **" ಸಂಚಲನ ತರಬೇತಿ ಸಂಚಿಕೆ"** ಆಧರಿಸಿ ತರಬೇತಿ ಆಯೋಜನೆಗೆ ಕ್ರಮವಾಗಬೇಕಿದೆ

  **( ಕ್ರಮ: ಕಾರ್ಯಕ್ರಮಾಧಿಕಾರಿ, ಓ.ಓ.ಎಸ್.ಸಿ)**

- ಪ್ರತಿ ತಿಂಗಳು ಕೇಂದ್ರದಿಂದ ಎಷ್ಟು ಮಕ್ಕಳು ಹೊರಗೆ ಹೋಗಿದ್ದಾರೆ, ಮನ: ಬಂದು ಸೇರಿಸುವ ಬಗ್ಗೆ ಮಾಹಿತಿ ಮತ್ತು ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಖಚಿತಪಡಿಸಿಕೊಳ್ಳಬೇಕು. ಇದನ್ನು ಪ್ರತಿ ತಿಂಗಳು ಕ್ರಮವಾಗಿ ಪ್ರಗತಿ ಪರಿಶೀಲನೆಯನ್ನು ಜಿಲ್ಲಾ ಹಂತದಲ್ಲಿ ನಡೆಸಬೇಕು ಹಾಗೂ ರಾಜ್ಯ ಹಂತದಲ್ಲಿ 3 ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ ಕಾರ್ಯ ನಡೆಯಬೇಕು.

  **( ಕ್ರಮ: ಜಿಲ್ಲಾ ಡಿ.ವೈ.ಪಿ.ಸಿ ಮತ್ತು ಕಾರ್ಯಕ್ರಮಾಧಿಕಾರಿ, ಓ.ಓ.ಎಸ್.ಸಿ)**

- ಪೋಷಕರೊಂದಿಗೆ ಹಾಗೂ ಮುಖ್ಯ ವಾಹಿನಿಗೆ ಸೇರಿಸಿದ ಮಕ್ಕಳ ಮಾಹಿತಿ (ದಾಖಲಾತಿ ಸಂಖ್ಯೆ ಶಾಲೆಯ ಹೆಸರು, ಮತ್ತು ದಿನಾಂಕ) ಅನುಪಾಲನೆಯನ್ನು ಇಲಾಖೆಯ ಅಧಿಕಾರಿಗಳು ಖುದ್ದಾಗಿ ನಿರ್ವಹಿಸಿ, ಬ್ಯಾಚ್‌ವೈಸ್ ಬೋರ್ಡ್‌ನಲ್ಲಿ ಯುಡಿಸಿ ಕೇಂದ್ರಗಳಲ್ಲಿ ಹಾಗೂ ಕಛೇರಿಗಳಲ್ಲಿ ನಿರ್ವಹಿಸಬೇಕು.

**ಕ್ರಮ: (ಕ್ಷೇ.ಶಿ.ಅ/ ಜಿಲ್ಲಾ ಉ.ನಿ/ಡಿ.ವೈ.ಪಿ.ಸಿ)**

- ಈ ಕೇಂದ್ರದಲ್ಲಿ ಅನಾರೋಗ್ಯಕರ ಚಟುವಟಿಕೆಗಳಾದ ಕುಡಿತ, ಧೂಮಪಾನ, ಮಾದಕ ವ್ಯಸನಕ್ಕೆ ಒಳಪಟ್ಟ ಮಕ್ಕಳು, ಸಾಗಾಣಿಕೆಗೆ ಒಳಪಟ್ಟ ಮಕ್ಕಳು, ಬಿಕ್ಷಾಟನೆಗೆ ಒಳಪಟ್ಟ ಮಕ್ಕಳು, ಬಲವಂತವಾಗಿ ಬಾಲ ಕಾರ್ಮಿಕ ಪದ್ಧತಿಗೆ ಒಳಪಟ್ಟ ಮಕ್ಕಳು, ದುಶ್ಚಟಗಳಿಗೆ ಒಳಪಟ್ಟು ಶಿಕ್ಷಣದಿಂದ ವಂಚಿತರಾದ ಮಕ್ಕಳು, ಮನೆಗಳಿಂದ ಓಡಿ ಬಂದಂತಹ ಮಕ್ಕಳು, ಕಾನೂನಿನೊಡನೆ ಸಂಘರ್ಷಕ್ಕೆ ಒಳಪಟ್ಟ ಮಕ್ಕಳು (ನಾನ್ ಸೀರಿಯಸ್ ಅಫೆನ್ಸ್) ವಿವಿಧ ಕಾರಣಗಳಿಗಾಗಿ (ಅಲ್ಪ/ಧೀರ್ಘಕಾಲ) ಪೋಷಕರಿಂದ ದೂರವಾದ ಮಕ್ಕಳ ಮನಸ್ಥಿತಿಯನ್ನು ಬದಲಿಸಿ ಅರಲ್ಲಿ ಆತ್ಮಸ್ಥೈರ್ಯ ಮೂಡಿಸಿ ಅವರು ಸಮಾಜದಲ್ಲಿ ಉತ್ತಮ ನಾಗರೀಕರಾಗಿ ಪರಿವರ್ತನೆ ಹೊಂದಲು ಸಂಬಂಧಿಸಿದ ಎನ್‌ಜಿಒ ಮತ್ತು ಇಲಾಖೆಯ ವಿವಿಧ ಸ್ಥರದ ಅಧಿಕಾರಿ ವೃಂದದವರು ಅಂದರೆ, **ಬಿಇಒ/ಬಿಆರ್‌ಸಿ/ಬಿಆರ್‌ಪಿ/ಸಿಆರ್‌ಪಿರವರು ಕೇಂದ್ರಕ್ಕೆ ವಿಶೇಷ ಕಾಳಜಿಯನ್ನು ವಹಿಸಿ ಶಾಲೆಯ ಮುಖ್ಯವಾಹಿನಿಗೆ ಸೇರಿಸುವಲ್ಲಿ ಪರಿಶ್ರಮಿಸಿ ಮಾರ್ಗದರ್ಶನ ನೀಡಿ, ಸಮಾಲೋಚನಾ ಸಭೆಗಳಲ್ಲಿ, ಮುಖ್ಯ ಶಿಕ್ಷಕರ ಸಭೆಗಳಲ್ಲಿ ಚರ್ಚಿಸುವುದು.**

**ಕ್ರಮ: (ಕ್ಷೇ.ಶಿ.ಅ/ ಜಿಲ್ಲಾ ಉ.ನಿ/ಡಿ.ವೈ.ಪಿ.ಸಿ)**

- ಡಿಡಿಪಿಐ/ಡಿವೈಪಿಸಿ/ಎಪಿಸಿ ರವರು ಕೇಂದ್ರಕ್ಕೆ ತಿಂಗಳಿಗೊಮ್ಮೆಯಾದರೂ ಭೇಟಿ ನೀಡಿ ಎನ್‌ಜಿಒಗಳ ಸಭೆಯನ್ನು ಆಯೋಜಿಸುವುದು. ಎಸ್‌ಎಸ್‌ಎಯ ಮಹತ್ವಾಕಾಂಕ್ಷಿ ಯೋಜನೆಯಾದ ಯುಡಿಸಿ ಕೇಂದ್ರಗಳಿಗೆ ಇಲಾಖೆಯ ಅಧಿಕಾರಿಗಳು ಭೇಟಿ ನೀಡದಿರುವುದು ತುಂಬಾ ವಿಷಾದನೀಯ ಸಂಗತಿ. ಜಿಲ್ಲಾ ಹಂತದಿಂದ ಅನುದಾನ ಬಿಡುಗಡೆ ಮಾಡುತ್ತಿರುವುದರಿಂದ ನಮಗೆ ಸಂಬಂಧವಿಲ್ಲವೆಂದು ಸಿಆರ್‌ಸಿ/ಬಿಆರ್‌ಸಿ/ಬಿಇಒಗಳ ವರ್ತನೆಯನ್ನು ಗಮನಿಸಲಾಯಿತು, ಇದು ಅಧಿಕಾರಿಗಳ ಬೇಜವಾಬ್ದರಿತನವನ್ನು ಎತ್ತಿ ತೋರಿಸುತ್ತದೆ. ಇದು ಸಹ ಅತ್ಯಂತ ವಿಷಾದನೀಯ ಸಂಗತಿ. ಜಿಲ್ಲೆಯಲ್ಲಿ ಸಮನ್ವಯತೆಯಿಂದ ಅವಕಾಶ ವಂಚಿತ ಮಕ್ಕಳ ಶಿಕ್ಷಣಕ್ಕೆ ಕ್ರಮವಹಿಸುವುದಕ್ಕೆ ಎಲ್ಲರೂ ಒಟ್ಟಾಗಿ ಕ್ರಮವಹಿಸಬೇಕು.

**ಕ್ರಮ: (ಕ್ಷೇ.ಶಿ.ಅ/ ಜಿಲ್ಲಾ ಉ.ನಿ/ಡಿ.ವೈ.ಪಿ.ಸಿ)**

2) **ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯ-2 ರ ಜಿಎಂಹೆಚ್‌ಪಿಎಸ್, ಸಂತೆ ಬೀದಿ, ಯಶವಂತಪುರ :- ಕೇಂದ್ರವನ್ನು ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು :- ಪರಸ್ಪರ ಟ್ರಸ್ಟ್,**

- ಈ ಕೇಂದ್ರವು ಹೆಣ್ಣು ಮಕ್ಕಳ ಕೇಂದ್ರವಾಗಿದ್ದು, ಬೇಸಿಗೆ ಶಿಬಿರವನ್ನು ಜಾಲಹಳ್ಳಿ ಕೇಂದ್ರದ ಸುಸಜ್ಜಿತ ವಾತಾವರಣದಲ್ಲಿ ನಡೆಸುವ ಹಿನ್ನೆಲೆಯಲ್ಲಿ ಜಾಲಹಳ್ಳಿ ಕೇಂದ್ರಕ್ಕೆ ಹೆಣ್ಣು ಮಕ್ಕಳನ್ನು ಸ್ಥಳಾಂತರಿಸಿದ್ದು, ಈ ಬಗ್ಗೆ ಇಲಾಖೆಯ ಅನುಮತಿಯನ್ನು ಪಡೆದಿರುವುದಿಲ್ಲ. ಇದಕ್ಕೆ ಕಾರಣ ಏನೆಂದು ಪರಿಶೀಲಿಸಲಾಗಿ ಮೇ 2013 ರ ಅಂತ್ಯಕ್ಕೆ ಕೇಂದ್ರವನ್ನು ಮುಚ್ಚುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳನ್ನು ಪೋಷಕರಿದ್ದಂತಹ ಸಂದರ್ಭದಲ್ಲಿ ಪೋಷಕರಿಗೆ, ವಸತಿ ನಿಲಯಗಳಿಗೆ ದಾಖಲಿಸುವ ಪ್ರಕ್ರಿಯೆ ಹಾಗೂ ಸಿಬ್ಲ್ಯೂಸಿ ಆದೇಶಾನುಸಾರ ಕ್ರಮ ವಹಿಸಲು ಹೆಣ್ಣು ಮಕ್ಕಳನ್ನು ಜಾಲಹಳ್ಳಿ ಕೇಂದ್ರದಲ್ಲಿ ಇರಿಸಿ ದಾಖಲೆಗಳೊಂದಿಗೆ ಪರಿಶೀಲನೆ ನಡೆಸುತ್ತಿರುವುದು ಕಂಡು ಬಂದಿದೆ. ಈ ಬಗ್ಗೆ ಜಿಲ್ಲಾ ಹಾಗೂ ವಲಯದ ಅಧಿಕಾರಿಗಳಿಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ಚಿಣ್ಣರ ತಂಗುಧಾಮದ ಮಕ್ಕಳ ಬಗ್ಗೆ ಕಾಳಜಿವಹಿಸದೆ ಇಂತಹ ಮಕ್ಕಳನ್ನು ರಕ್ಷಿಸುವ ಮತ್ತು ಪೋಷಿಸುವ ಕಾರ್ಯದಲ್ಲಿ ಅಧಿಕಾರಿಗಳು ವಿಫಲವಾಗಿರುವುದು ವಿಷಾಧನೀಯ ಸಂಗತಿ. ಮಾಸಿಕ ಈ ಕೇಂದ್ರಗಳ ಆಗು ಹೋಗುಗಳ ಬಗ್ಗೆ ಜಿಲ್ಲೆಯು ಕ್ರಮವಹಿಸಬೇಕಿದೆ.

**ಕ್ರಮ: ( ಎಲ್ಲಾ ಸ್ವಯಂ ಸೇವಕ ಸಂಸ್ಥೆಗಳು/ಉ.ನಿ/ಡಿ.ವೈ.ಪಿ.ಸಿ/ಕ್ಷೇ.ಶಿ.ಅ/ಸಿ.ಆರ್.ಪಿ)**

- ಚುನಾವಣಾ ಸಂದರ್ಭದಲ್ಲಿ ಸಂತೆ ಬೀದಿ, ಯಶವಂತಪುರ ಕೇಂದ್ರದಲ್ಲಿದ್ದಂತಹ ಹೆಣ್ಣು ಮಕ್ಕಳನ್ನು ಜಾಲಹಳ್ಳಿ ಕೇಂದ್ರಕ್ಕೆ ಸ್ಥಳಾಂತರಿಸಿ ಹಿನ್ನೆಲೆಯಲ್ಲಿ ಸದರಿ ಕೇಂದ್ರಕ್ಕೆ ಹೆಸರಘಟ್ಟ ಹಾಗೂ ಮಲ್ಲಸಂದ್ರ ಕೇಂದ್ರಗಳಲ್ಲಿದ್ದ ಗಂಡು

ಮಕ್ಕಳನ್ನು ಸ್ಥಳಾಂತರಿಸಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಪ್ರತಿ ವಾರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿವೀಕ್ಷಣೆ ಮಾಡುವುದು.

**(ಕ್ರಮ: ಕ್ಷೇ.ಶಿ.ಅ/ಬಿ.ಆರ್.ಸಿ)**

- ಒಂದು ವರ್ಷದ ಅವಧಿಯ ಒಪ್ಪಂದದ ಕಾರ್ಯಕ್ರಮವಾಗಿರುವ ಹಿನ್ನೆಲೆಯಲ್ಲಿ ಕೇಂದ್ರದಲ್ಲಿ ಇದ್ದಂತಹ 5 ತಾತ್ಕಾಲಿಕ ಸಿಬ್ಬಂದಿ ಕೇಂದ್ರ ಮುಚ್ಚುತ್ತಿರುವುದರಿಂದ ಬೇರೆ ಕೆಲಸವನ್ನು ಹುಡುಕಲು ಹೊರಟುಹೋಗಿರುತ್ತಾರೆ. ಆದುದರಿಂದ ಸದರಿ ಪರಸ್ಪರ ಸಂಸ್ಥೆಯ ನೌಕರರು ಪ್ರಸ್ತುತ ಮಕ್ಕಳ ಪೋಷಣೆ ಮಾಡುತ್ತಿರುವುದನ್ನು ಗಮನಿಸಲಾಯಿತು. ಈ ಬಗ್ಗೆ ಇಲಾಖೆ ಅಧಿಕಾರಿಗಳು ಮತ್ತು ಸ್ವಯಂ ಸೇವಕ ಸಂಸ್ಥೆಯ ಪ್ರತಿನಿಧಿಗಳು ಅವಕಾಶ ವಂಚಿತ ಮಕ್ಕಳ ರಕ್ಷಣೆ ಮತ್ತು ಪೋಷಣೆಯನ್ನು ಸಮನ್ವಯದಲ್ಲಿ ನಿರ್ವಹಿಸುತ್ತಿರುವುದಿಲ್ಲ, ಇದರಿಂದಾಗಿ ಇಂತಹ ಮಕ್ಕಳ ಸ್ಥಿತಿ ಗತಿಯಲ್ಲಿ ಹಾಗೂ ಶಿಕ್ಷಣವನ್ನು ನೀಡುವ ಕಾರ್ಯ ವಿಫಲವಾಗುತ್ತದೆ. ಈ ಬಗ್ಗೆ ಎಲ್ಲ ಅಧಿಕಾರಿಗಳು ಮತ್ತು ಸ್ವಯಂ ಸೇವಕರು ಕಾಳಜಿವಹಿಸಿ ಕಾರ್ಯ ನಿರ್ವಹಿಸುವುದು ಅತ್ಯಾವಶ್ಯಕವಾಗಿರುತ್ತದೆ.

**ಕ್ರಮ( ಸ್ವಯಂ ಸೇವಾ ಸಂಸ್ಥೆಗಳು, ಸಿ.ಆರ್.ಪಿ/ಬಿ.ಆರ್.ಸಿ/ಕ್ಷೇ.ಶಿ.ಅ/ಡಿ.ವೈ.ಪಿ.ಸಿ ಹಾಗೂ ಉ.ನಿ)**

- ಮಕ್ಕಳ ದಾಖಲೆಗಳು ಕೇಂದ್ರದಲ್ಲಿ ಲಭ್ಯವಾದವು. ಯಾವುದೇ ಮಗುವನ್ನು ವಿಶೇಷ ತರಬೇತಿ ಕೇಂದ್ರ /ಶಾಲಾ ಮುಖ್ಯವಾಹಿನಿಗೆ ತಂದಿರುವುದಿಲ್ಲ. ವಿಶೇಷ ತರಬೇತಿ ಕೇಂದ್ರ /ಶಾಲಾ ಮುಖ್ಯವಾಹಿನಿ/ ವಸತಿಯುತ ಸೌಕರ್ಯಕ್ಕೆ ಮಕ್ಕಳನ್ನು ತರುವಲ್ಲಿ ಕೇಂದ್ರದ ಮುಖ್ಯಸ್ಥರಿಗೆ ಮಾಹಿತಿಯ ಕೊರತೆ ಇರುವುದನ್ನು ಗುರುತಿಸಲಾಯಿತು. ಈ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಸ್ವಯಂ ಸೇವಕ ಸಂಸ್ಥೆಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಅರಿವನ್ನು ತುರ್ತಾಗಿ ಮೂಡಿಸುವುದು.

**(ಕ್ರಮ: ಕಾ.ಅ, ಸ.ಶಿ.ಅ/ಉ.ನಿ/ಡಿ.ವೈ.ಪಿ.ಸಿ)**

3) **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೆಗ್ಗನಹಳ್ಳಿ**

**ಕೇಂದ್ರವನ್ನು ನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು :- ಆದರ್ಶ ರೂರಲ್ ಡೆವಲಪ್‌ಮೆಂಟ್ ಸೊಸೈಟಿ**

ದಾಖಲಾಗಿರುವ ಮಕ್ಕಳು : 60
ಭೇಟಿ ನೀಡಿದ ಅವಧಿಯಲ್ಲಿ ಹಾಜರಿದ್ದ ಮಕ್ಕಳು : 08
ಮುಖ್ಯ ವಾಹಿನಿಗೆ ಸೇರಿರುವ ಮಕ್ಕಳು : 40
ಪೋಷಕರು ಕರೆದುಕೊಂಡು ಹೋಗಿರುವ ಮಕ್ಕಳ ಸಂಖ್ಯೆ : 25

ಈ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗಮನಿಸಿದಂತೆ ಇಲಾಖೆಯ ಸಿಆರ್‌ಪಿ/ಬಿಇಒ ವಿವಿಧ ಸ್ಥರದ ಅಧಿಕಾರಿಗಳು ಸಂಪೂರ್ಣ ನಿರ್ಲಕ್ಷ್ಯ ವಹಿಸಿರುವುದು ತಿಳಿದು ಬಂತು. ಈ ಬಗ್ಗೆ ಕಾರಣ ಕೇಳುವ ನೋಟೀಸ್ ಅನ್ನು ಉ.ನಿ. ರವರು ಬಿ.ಆರ್.ಸಿ ಮತ್ತು ಸಿ.ಆರ್.ಸಿ ಗಳಿಗೆ ನೀಡಿ ವರದಿ ನೀಡುವುದು.

**(ಕ್ರಮ: ಉ.ನಿ, ಬೆಂಗಳೂರು ಉತ್ತರ )**

**ಚಿಣ್ಣರ ತಂಗುಧಾಮಕ್ಕೆ ಸಂಬಂಧಿಸಿದಂತೆ ತುರ್ತಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು :-**

- **ಎಲ್ಲಾ ಕೇಂದ್ರಗಳಲ್ಲಿ ಮಕ್ಕಳನ್ನು ವಸತಿಯುತ ಸೌಕರ್ಯಕ್ಕೆ ಸ್ಥಳಾಂತರಿಸಲು/ಮುಖ್ಯವಾಹಿನಿಗೆ ಸೇರಿಸಲು ಕೇಂದ್ರವಾರು ಮಕ್ಕಳ ಪಟ್ಟಿಯನ್ನು ತುರ್ತಾಗಿ ಪಡೆಯುವುದು.**
- **ಕೇಂದ್ರಗಳನ್ನು ಮುಚ್ಚುವಂತಹ ಸಂದರ್ಭಗಳಲ್ಲಿ ಮಕ್ಕಳನ್ನು ವಿವಿಧ ವಸತಿ ನಿಲಯಗಳಿಗೆ ಅಥವಾ ಮುಖ್ಯವಾಹಿನಿಗೆ ದಾಖಲು ಮಾಡುವಲ್ಲಿ ನಿಯಮಾನುಸಾರ (ಜೆ. ಜೆ. ಆಕ್ಟ್ ಪ್ರಕಾರ) ಸಿಡಬ್ಲ್ಯುಸಿ ಅನುಮೋದನೆಯೊಂದಿಗೆ ದಾಖಲು ಮಾಡುವಲ್ಲಿ ಮಕ್ಕಳನ್ನು ವಿಂಗಡಣೆ ಮಾಡಿ ಪೋಷಕರಿದ್ದಂತಹ ಸಂದರ್ಭದಲ್ಲಿ ಅನುಮತಿಯೊಂದಿಗೆ ಕ್ರಮ ವಹಿಸುವುದು.**

- **ವಸತಿ ನಿಲಯಗಳಲ್ಲಿ ಅವಕಾಶ ವಂಚಿತ ಮಕ್ಕಳ ಪೂರ್ಣ ರಕ್ಷಣೆಗೆ ವ್ಯವಸ್ಥೆಯನ್ನು ರೂಪಿಸಬೇಕಿದೆ. ಇದಕ್ಕೆ ಎಲ್ಲಾ ಭಾಗೀಧಾರ ಇಲಾಖೆಗಳ ಸಹಯೋಗದಲ್ಲಿ ನಿರ್ಧಿಷ್ಟ ಕ್ರಮದ ಅಗತ್ಯವಿರುತ್ತದೆ.**
- **ಅವಕಾಶ ವಂಚಿತ ಮಕ್ಕಳ ಕುರಿತಂತೆ ಎಲ್ಲಾ ಹಂತದ ಅಧಿಕಾರಿಗಳಿಗೆ ತರಬೇತಿ ಆಯೋಜಿಸುವುದು.**
- **ಚಿಣ್ಣರ ತಂಗುಧಾಮಗಳಲ್ಲಿನ ಎಷ್ಟು ಮಕ್ಕಳಿಗೆ ಆರ್.ಟಿ.ಇ. ಅಡಿಯಲ್ಲಿ ಖಾಸಗಿ ಶಾಲೆಗಳಲ್ಲಿ ದಾಖಲು ಮಾಡುವಲ್ಲಿ ಕ್ರಮವಹಿಸಿದೆ ಎಂಬ ಬಗ್ಗೆ ವರದಿಯನ್ನು ಉಪನಿರ್ದೇಶಕರು ನೀಡುವುದು.**

**ಕ್ರಮ: ಸ್ವಯಂ ಸೇವಕ ಸಂಸ್ಥೆಗಳು, ಸಿ.ಆರ್.ಪಿ, ಬಿ.ಆರ್.ಸಿ, ಕ್ಷೇ.ಶಿ.ಅ, ಉ.ನಿ, ಡಿ.ವೈ.ಪಿಸಿ ಮತ್ತು ರಾಜ್ಯ ಕಛೇರಿಯ ಸಹ ನಿರ್ದೇಶಕರು (ಕಾರ್ಯಕ್ರಮಗಳು)**

4) **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೆಗ್ಗನಹಳ್ಳಿಯ ಚಿಣ್ಣರ ಅಂಗಳ ಕೇಂದ್ರ :–** ಇದು 3 ತಿಂಗಳ ವಸತಿಯುತ ಕೇಂದ್ರವಾಗಿದ್ದು, ಇಲ್ಲಿಗೆ ಭೇಟಿ ನೀಡಲಾಗಿ, ಮಕ್ಕಳೊಂದಿಗೆ ಸಂದರ್ಶನ ಮಾಡಲಾಗಿ ಹಾಗೂ ಅವರ ಕಲಿಕಾ ಮಟ್ಟದ ಸಾಮರ್ಥ್ಯವನ್ನು ಪರಿಶೀಲಿಸಲಾಯಿತು.

- ಕೇಂದ್ರ ಪ್ರಾರಂಭವಾದ ದಿನಾಂಕ: 15.04.2013
- ಕೆಲವು ಮಕ್ಕಳು ಶಾಲೆಗೆ ಹೋಗುತ್ತಿದ್ದು, ಅಂತಹ ಮಕ್ಕಳನ್ನು ಸಹ ಕೇಂದ್ರಗಳಲ್ಲಿ ದಾಖಲೆ ತೋರಿಸಿ ನಿಯಮ ಉಲ್ಲಂಘನೆ ಜೊತೆಯಲ್ಲಿ ಅಸಮರ್ಪಕವಾಗಿ ಕೇಂದ್ರವನ್ನು ನಡೆಸುತ್ತಿರುವುದು ವಿಷಾದನೀಯ ಸಂಗತಿ.
- ಮಕ್ಕಳಿಗೆ ದೈನಂದಿನ ವಸ್ತುಗಳನ್ನು ನಿಯಮಾನುಸಾರ ನೀಡಿರುವುದಿಲ್ಲ. ಇದರಿಂದ ಮಕ್ಕಳಿಗೆ ವಂಚನೆ ಎಸಗಿರುವುದು ಹಾಗೂ ಮಕ್ಕಳ ಹಕ್ಕಿನ ಉಲ್ಲಂಘನೆಯು ಸಹ ಆಗಿರುತ್ತದೆ.
- ಕೇಂದ್ರದ ಶಿಕ್ಷಕರ ಹೇಳಿಕೆಗೂ ಮತ್ತು ಮಕ್ಕಳ ಹೇಳಿಕೆಗಳು ವ್ಯತ್ಯಾಸದಿಂದ ಕೂಡಿದ್ದು, ಕೇಂದ್ರಗಳು ಸಮರ್ಪಕವಾಗಿ ನಿಯಮಾನುಸಾರ ಕಾರ್ಯನಡೆಯದೆ ಇರುವುದು ಅನುಮಾನವನ್ನು ಉಂಟುಮಾಡಿದೆ.
- ನಾಗರಾಜ ಎಂಬ ವಿದ್ಯಾರ್ಥಿ ಶಾಲೆಗೆ ಹೋಗುತ್ತಿದ್ದು ಅವನ ನಿಜವಾದ ಹೆಸರು ಶಶಿಕುಮಾರ್ ಆಗಿದ್ದು, 3 ನೇ ತರಗತಿ ಉತ್ತೀರ್ಣ ಆಗಿರುತ್ತಾನೆ. ಈ ಮಗುವಿಗೆ ಹೆಸರು ಬದಲಾಯಿಸಿ ತಿಳಿಸಲು ಹೇಳಿರುತ್ತಾರೆ. ಇದು ಅತ್ಯಂತ ಘೋರ ಸಂಗತಿಯಾಗಿರುತ್ತದೆ, ಕಾರಣ ಮಕ್ಕಳಲ್ಲಿ ಸುಳ್ಳು ಹೇಳುವ ಪ್ರವೃತ್ತಿಯನ್ನು ಹುಟ್ಟು ಹಾಕುತ್ತಿರುವುದು ಅತ್ಯಂತ ವಿಷಾಧನೀಯ ವಿಷಯವಾಗಿದೆ.
- ಮಕ್ಕಳನ್ನು ಪೋಷಕರು ಕರೆದುಕೊಂಡು ಹೋದ ಬಗ್ಗೆ ದಾಖಲೆ ಇರುವುದಿಲ್ಲ.
- ಹೀಗಾಗಿ ಹೇಳಿಕೆಗಳು ಭಿನ್ನವಾಗಿ ಕೇಂದ್ರದಲ್ಲಿ ನಿಖರವಾದ ಮಾಹಿತಿ ಲಭ್ಯವಾಗುತ್ತಿಲ್ಲ.
- ವಿಷಾದನೀಯ ಸಂಗತಿ ಎಂದರೆ, ಆ ಕೇಂದ್ರಕ್ಕೆ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳ ಪಟ್ಟಿಗೂ, ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ವೀಕ್ಷಿಸಿದ ಮಕ್ಕಳೂ ಬೇರೆ ಬೇರೆ ಆಗಿದ್ದವು. ಈ ಕೇಂದ್ರದ ನಿರ್ವಹಣೆಯು ಸಂಶಯಾಸ್ಪದವಾಗಿ ಕಾಣುತ್ತಿದೆ.

**ಕ್ರಮ: ಕೂಡಲೇ ಉಪನಿರ್ದೇಶಕರು (ಆಡಳಿತ) ಇವರು ಸಂಬಂಧಿಸಿದವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ, ವರದಿಯನ್ನಾಧರಿಸಿ ಕೇಂದ್ರಕ್ಕಾಗಿ ವಿನಿಯೋಗಿಸಲಾಗಿರುವ ಅನುದಾನವನ್ನು ತಪ್ಪಿತಸ್ಥ ಅಧಿಕಾರಿಗಳ ವೇತನದಲ್ಲಿ ಕಟಾಯಿಸಿ ಸರ್ಕಾರಕ್ಕೆ ವಾಪಸ್ಸು ಭರಿಸಲು ಕ್ರಮ ವಹಿಸುವುದು.**

ಚಿಣ್ಣರ ಅಂಗಳ ಕೇಂದ್ರಗಳಿಗೆ ಸಂಬಂಧಿಸಿದಂತೆ ಕ್ರಮಗಳು:

1. ಚಿಣ್ಣರ ಅಂಗಳ ಕೇಂದ್ರಗಳಿಂದ ಮುಖ್ಯವಾಹಿನಿಗೆ ತಂದ ಮಕ್ಕಳ ಮಾಹಿತಿಯನ್ನು ಕೂಡಲೆ ಆನ್ ಲೈನ್ ಚೈಲ್ಡ ಟ್ರಾಕ್ ಮಾಹಿತಿಯಲ್ಲಿ ಅಳವಡಿಸುವುದು.
2. ಜಿಲ್ಲಾವಾರು ಚಿಣ್ಣರ ಅಂಗಳ ಕಾರ್ಯಕ್ರಮದ ಕೇಸ್ ಸ್ಟಡೀಸ್ ಮಾಹಿತಿಯನ್ನು ಸಿದ್ಧಪಡಿಸಿ ರಾಜ್ಯ ಕಛೇರಿಗೆ / ಶಿಕ್ಷಣ ವಾರ್ತೆಯಲ್ಲಿ ಪ್ರಕಟಿಸಲು ಕ್ರಮವಹಿಸುವುದು.
3. ಮದ್ರಸಾದಲ್ಲಿನ ಮಕ್ಕಳನ್ನು ಮುಖ್ಯವಾಹಿನಿಗೆ ತರುತ್ತಿರುವ ಬಗ್ಗೆ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.
4. ಜಿಲ್ಲೆಯ ಎಲ್ಲಾ ಚಿಣ್ಣರ ಅಂಗಳ ಕೇಂದ್ರಗಳನ್ನು ಸಮರ್ಪಕವಾಗಿ ನಡೆಸಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಅವರವರ ಅವಶ್ಯಕತೆಗೆ ಅನುಗುಣವಾಗಿ ಸೌಕರ್ಯವನ್ನು ಒದಗಿಸಿ ಮಕ್ಕಳ ರಕ್ಷಣೆ ಪೋಷಣೆ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು. ಇದಲ್ಲದೆ, ಎಲ್ಲರೂ ಒಗ್ಗೂಡಿ ಇಂತಹ ಮಕ್ಕಳ ಶಿಕ್ಷಣಕ್ಕೆ ಕೈ ಜೋಡಿಸುವಲ್ಲಿ ಉತ್ತಮ ಕ್ರಮಗಳು ಕೈಗೊಳ್ಳಲು ತಮ್ಮ ಅನಿಸಿಕೆಗಳನ್ನು ಸಹ ವ್ಯಕ್ತ ಪಡಿಸಲು ಸೂಚಿಸಿದೆ.
5. ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಯ ಉಪನಿರ್ದೇಶಕರು, ಜಿಲ್ಲೆಯಲ್ಲಿ ನಡೆಯುತ್ತಿರುವ ಚಿಣ್ಣರ ಅಂಗಳ/ ವಿಶೇಷ ತರಬೇತಿ ಕೇಂದ್ರಗಳು/ ಚಿಣ್ಣರ ತಂಗುಧಾಮಗಳಿಗೆ ಖುದ್ದಾಗಿ ತಂಡಗಳಲ್ಲಿ ವ್ಯವಸ್ಥಿತ ಮಾಹಿತಿಯೊಂದಿಗೆ ರ್‍ಯಾಪಿಡ್ ಆಕ್ಷನ್ ಫೋರ್ಸ್ ಮೂಲಕ ಸುಗಮಕಾರರಾಗಿ ಮಕ್ಕಳ ಹಿತದೃಷ್ಟಿಯನ್ನು ಗಮನದಲ್ಲಿ ಇರಿಸಿ ವರದಿಯನ್ನು ಖುದ್ದಾಗಿ 10 ದಿನಗಳೊಳಗಾಗಿ ಸಲ್ಲಿಸಲು ಸೂಚಿಸಿದೆ.

ಕ್ರಮ: ಸ್ವಯಂ ಸೇವಕ ಸಂಸ್ಥೆಗಳು, ಸಿ.ಆರ್.ಪಿ, ಬಿ.ಆರ್.ಸಿ, ಕ್ಷೇ.ಶಿ.ಅ, ಉ.ನಿ, ಡಿ.ವೈ.ಪಿಸಿ ಮತ್ತು ರಾಜ್ಯ ಕಛೇರಿಯ ಸಹ ನಿರ್ದೇಶಕರು (ಕಾರ್ಯಕ್ರಮಗಳು)

11.6.13

ರಾಜ್ಯ ಯೋಜನಾ ನಿರ್ದೇಶಕರು,
ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು

ಪ್ರತಿಯನ್ನು ಅವಗಾಹನೆಗೆ ಸಲ್ಲಿಸಿದೆ:

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾ & ಪ್ರೌ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಪ್ರತಿಯನ್ನು

1. ನಿರ್ದೇಶಕರು(ಕಾರ್ಯಕ್ರಮಗಳು) ಇವರಿಗೆ ಮುಂದಿನ ಅನುಪಾಲನೆಗಾಗಿ
2. ಸಹನಿರ್ದೇಶಕರು(ಕಾರ್ಯಕ್ರಮ) ಇವರಿಗೆ ಮುಂದಿನ ಅನುಪಾಲನೆ ಹಾಗೂ ಸೂಕ್ತ ಕ್ರಮಕ್ಕಾಗಿ
3. ರಾಜ್ಯ ಯೋಜನಾ ಕಚೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಸೂಕ್ತ ಅನುಪಾಲನ ಕ್ರಮಕ್ಕಾಗಿ